ಲಭ್ಯತೆ ಇಲ್ಲ. ಲಭ್ಯತೆ ಬಂದ ಮೇಲೆ, ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾರೆ. ಸಹಜವಾಗಿ, ಸಾಮಾನ್ಯವಾಗಿ ಅಧಿವೇಶನ ನಡೆದಿರುವ ಸಂದರ್ಭದಲ್ಲಿ, ಸರ್ಕಾರದ ವಿಚಾರಗಳನ್ನು ಪತ್ರಿಕೆಗಳಿಗೆ ಹೇಳಬೇಕಾದ ಅಗತ್ಯವಿಲ್ಲ. ಆದರೆ, ಅದು ಯಾವ ಸನ್ನಿವೇಶ, ಯಾವ ಪ್ರಶ್ನೋತ್ತರ ಕಾಲ ಎನ್ನುವುದಕ್ಕೆ ಕೌಲ್ ಅಂಡ್ ಷಕ್ದರ್‌ನಲ್ಲಿ ಅನೇಕ ವಿಚಾರಗಳ ಮೇಲೆ ಪ್ರಸ್ತಾಪಿಸಲ್ಪಟ್ಟಿವೆ. ಆದರೂ ಕೂಡ ಇದನ್ನು ನಾವು ಗಮನದಲ್ಲಿಟ್ಟುಕೊಂಡು ತಮ್ಮ ಸಲಹೆಯನ್ನು ಜಾರಿ ಗೊಳಿಸುತ್ತೇವೆ.

7. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಈ ವರ್ಷದ ಉಳಿದ ಭಾಗ ಸುಮಾರು 8 ತಿಂಗಳಿಗೆ ಸನ್ಮಾನ್ಯ ಅರ್ಥ ಸಚಿವರು ಏನು ಆಯವ್ಯಯ ಮಂಡನೆ ಮಾಡಿದ್ದಾರೆ, ಅದನ್ನು ವಿರೋಧ ಮಾಡುತ್ತಾ, ನನ್ನ ಭಾಷಣವನ್ನು ಆರಂಭ ಮಾಡುತ್ತಿದ್ದೇನೆ. ಭಾಷಣಕ್ಕೆ ನನ್ನನ್ನು ಕರೆದಿದ್ದಕ್ಕೆ ತಮಗೆ ನಾನು ವಂದಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಮಂಡನೆಯಲ್ಲಿ, ಅದು ಇಲ್ಲಿಯದಿರಬಹುದು, ಕೇಂದ್ರದ್ದು ಇರಬಹುದು, ಮಾತುಗಳು ಬಹಳ ಆಗುತ್ತವೆ. ಪ್ರಯೋಜನ ಏನಾಗುತ್ತದೆಂದು ಕೇಳಿದರೆ, ಬಾಯಿಗೆ ತುಪ್ಪ ಸವರಿ ಬಿಟ್ಟು ಹೋಳಿಗೆ ಊಟ ಇಟ್ಟಿದ್ದೇವೆ ಎನ್ನುವ ಭಾವನೆ ಜನರಿಗೆ ಬರಬೇಕೆನ್ನುವ ರೀತಿಯಲ್ಲಿ ಆಯವ್ಯಯಗಳು ಮಂಡನೆಯಾಗುತ್ತವೆ. ನಾನು ಬಹಳ ದಿವಸಗಳಿಂದ ಈ ಸಭೆಯ ಆಯವ್ಯಯಗಳನ್ನು ನೋಡಿಕೊಂಡು ಬಂದಿದ್ದೇನೆ. ಇಲ್ಲಿ ನಾವು ಮಾತನಾಡುವುದಕ್ಕೂ, ನಾವು ಚುನಾವಣೆಯಲ್ಲಿ ಮಾತನಾಡುವುದಕ್ಕೂ, ನಾವು ರಾಜ್ಯಪಾಲರ ಭಾಷಣದಲ್ಲಿ ಹೇಳುವುದಕ್ಕೂ ಯಾವತ್ತೂ ತಾಳೆಯಾಗಲೇ ಇಲ್ಲ. ನಾವು ಚುನಾವಣಾ ಪ್ರಣಾಳಿಕೆಯಲ್ಲೇನು ಹೇಳಿ ಬರುತ್ತೇವೆ ಅಥವಾ ಆದಾದ ನಂತರ, ರಾಜ್ಯಪಾಲರ ಭಾಷಣದಲ್ಲಿ ಏನು ಹೇಳುತ್ತಾರೆ? ಯಾವ ಕಾರ್ಯಕ್ರಮಕ್ಕೆ ನಾವು ಆದ್ಯತೆ ಕೊಡುತ್ತೇವೆಂದು ಅಲ್ಲಿ ಮಾತನಾಡಿರುತ್ತೇವೆ, ಆಯವ್ಯಯ ಮಂಡನೆ ಮಾಡಬೇಕಾದರೆ ಅದಕ್ಕೆ ಆಸಕ್ತಿ ಅಥವಾ ಆದ್ಯತೆ ಏತಕ್ಕೆ ಕೊಡುತ್ತೇವೆಂದು ಯೋಚನೆ ಮಾಡಿ ಮಾಡುವ ಆಯವ್ಯಯಗಳು ಮಂಡನೆಯಾಗಿರುವುದು ಬಹಳ ಕಡಿಮೆ. ಎರಡನೆಯದಾಗಿ, ನಾನು ಸನ್ಮಾನ್ಯ ಸಿದ್ದರಾಮಯ್ಯನವರಿಗೆ ನೇರವಾಗಿ ಕೇಳುತ್ತೇನೆ, ಆಯವ್ಯಯವನ್ನು ಮಂಡಿಸುವ ಕಾಲಕ್ಕೆ, ಯಾವತ್ತಾದರೂ ಈ ಸರ್ಕಾರ ತೀರುವಳಿ ಮಾಡಬೇಕಾಗಿರುವ ಬಾಕಿಗಳ ಬಗ್ಗೆ ಮಾತನಾಡಿದೆಯೇ? ಯಾವತ್ತಾದರೂ ನಾವು ಆಯವ್ಯಯದಲ್ಲಿ ಇದ್ದಷ್ಟು ಹಣವನ್ನು ಸಂಬಂಧಪಟ್ಟ ಕಡೆಗೆ ವಿನಿಯೋಗ ಮಾಡಿದ್ದೇವೆಯೇ? ಯಾವತ್ತಾದರೂ ನಾವು ನಿರೀಕ್ಷೆ ಮಾಡಿದಷ್ಟು ರಾಜಸ್ವವನ್ನು ಈ ರಾಜ್ಯಕ್ಕೆ ತಂದಿದ್ದೇವೆಯೇ? ನಿಮ್ಮ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾದವರು, ಸರಾಸರಿ 9.7 ರಷ್ಟು ರೆಸಿಟ್ಸ್ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ನೀವೇನು ಆಯವ್ಯಯ ಮಂಡನೆ ಮಾಡಿ, ನಮಗೆ ಅಷ್ಟು ಹಣ ಬರುತ್ತದೆಂದು ಭಾಷಣದಲ್ಲಿ ಉದ್ದುದ್ದ ಹೇಳುತ್ತೀರಿ, ಸರಿಸುಮಾರು ಹತ್ತು ಪಟ್ಟಿನಷ್ಟು ಹಣ ನಮಗೆ ಬರುವುದೇ ಇಲ್ಲ. ಎರಡನೆಯದಾಗಿ, ಆಯವ್ಯಯ ಮಂಡನೆಯಲ್ಲಿ ನಾವೇನು ವಿನಿಯೋಗ ಮಾಡುತ್ತೇವೆ, ಕೊಡುತ್ತೇವೆಂದು ಹೇಳುತ್ತೇವೆ, ಬಹುಶಃ ಯಾವುದೇ ವರ್ಷ ಅಷ್ಟು ಹಣವನ್ನು ನಾವು ವಿನಿಯೋಗಿಸಲಿಲ್ಲ. ನಾನು ಉದಾಹರಣೆಗಾಗಿ ಹೇಳುತ್ತೇನೆ, ಕೆಪಿಟಿಸಿಎಲ್ ಬಗ್ಗೆ ಪ್ರತೀ ವರ್ಷ ನಾವು ಭಾಷಣ ಮಾಡುತ್ತೇವೆ, ಅದಕ್ಕೆ 2000, 2200

ಕೋಟಿ ರೂಪಾಯಿ ಕೊಟ್ಟಿದ್ದೇವೆ, 2,700 ಕೋಟಿ ರೂಪಾಯಿ, 2,800 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು. ಯಾವತ್ತೂ ಕೊಡಲಿಲ್ಲ. ಸನ್ಮಾನ್ಯ ಪಾಟೀಲ್‌ರವರು, ಹಿರಿಯ ಸಹಕಾರಿಗಳು ಹೇಳಿ, ಯಾವುದೇ ವರ್ಷ ನಾವೇನಾದರೂ ಲೋನ್ ವೇವರ್, ಇಂಟರೆಸ್ಟ್ ವೇವರ್ ಸ್ಕೀಂ ತಂದರೆ, ಆ ಹಣವನ್ನು ಆ ವರ್ಷ ಸಹಕಾರಿ ಸಂಘಗಳಿಗೆ ತುಂಬಿ ಕೊಡಲೇ ಇಲ್ಲ. ಯಾವುದೋ ವರ್ಷದ ಬಜೆಟ್‌ನಲ್ಲಿ ಹೇಳುತ್ತೇವೆ, ಇನ್ಯಾವುದೋ ವರ್ಷ ತುಂಬಿ ಕೊಡುತ್ತೇವೆ. ಸನ್ಮಾನ್ಯ ಸಿದ್ದರಾಮಯ್ಯನವರು ಕಳೆದ ವರ್ಷ ಬಡ್ಡಿ ಮನ್ನಾ ಮಾಡಿದ್ದಕ್ಕೆ, ಈ ವರ್ಷ 83 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಯಾರಾದರೂ ಆಯವ್ಯಯವೆಂದು ಹೇಳುತ್ತಾರೆಯೇ? ಇದು ಈ ವರ್ಷಕ್ಕೆ ಸೀಮಿತವಾದುದೆಂದು ಹೇಳುತ್ತಾರೆಯೇ? ನಾವೇನಾದರೂ ಈ ವರ್ಷದ ಅಂದಾಜುಗಳು ಎಂದು ಇದನ್ನು ಕರೆಯುವುದಕ್ಕಾಗುತ್ತದೆಯೇ? ಚರ್ಚೆಯನ್ನು ಮೊದಲೇ ಮಾಡಬೇಕಾಗಿತ್ತು. ನಮಗಿರುವ ಸಂಪನ್ಮೂಲಗಳಿಗೆ ಲಾಯಕ್ಕಾದ ವೆಚ್ಚಗಳನ್ನು ಇಟ್ಟುಕೊಂಡು, ಆಯವ್ಯಯ ಮಂಡಿಸಿದರೆ, ಅದಕ್ಕೆ ಆಯವ್ಯಯ ಎನ್ನುವುದಕ್ಕೊಂದು ಅರ್ಥ ಬರುತ್ತದೆ. ಯಾರಿಗಾದರೂ ಕನಿಷ್ಠ ಮಾರ್ಚ್ 30, 31ನೇ ತಾರೀಖು ಸರ್ಕಾರ ಬಾಕಿ ತೀರಿಸುತ್ತದೆಂದರೆ, ಅದಕ್ಕೆ ಸರ್ಕಾರ ಎನ್ನುವುದಕ್ಕೆ ಘನತೆ ಬರುತ್ತದೆ. ಈ ಬಾಕಿ ಪಟ್ಟಿಗೆ ಬಂದಾಗ ಮಾತನಾಡುತ್ತೇನೆ. ಏಕೆಂದರೆ, ಮುಖ್ಯ ಭಾಷಣವನ್ನು ಸನ್ಮಾನ್ಯ ಲೀಡರ್‌ರವರು ಮಾಡಿದ್ದಾರೆ. ಒಂದು, ನೀವು ಸಾಲ ತೀರಿಸುವುದು, ಕಂತು ಕೊಡುವುದು, ಇನ್ನೊಂದು ಇಲಾಖಾವಾರು ತಾವು ಕೊಡಬೇಕಾಗಿರುವ ಅನುದಾನಗಳನ್ನು ಏನು ಬಿಡುಗಡೆ ಮಾಡಿತ್ತು ಅದು. ಇವತ್ತು ಸನ್ಮಾನ್ಯ ಸಿದ್ದರಾಮಯ್ಯನವರು ಇಲ್ಲ. ಸನ್ಮಾನ್ಯ ಪ್ರಕಾಶ್‌ರವರೇ ಕೇಳುತ್ತೇನೆ, ಅಪ್ಪರ್ ಕೃಷ್ಣಗೆ ತಾವು ಎಷ್ಟು ಹಣ ಕೊಡಬೇಕು? ಕಾವೇರಿ ಜಲಾನಯನ ಪ್ರದೇಶದಲ್ಲಿ ಹೇಮಾವತಿ ಪ್ರಾಜೆಕ್ಟ್ ಇರಬಹುದು, ಕಬಿನಿ ಪ್ರಾಜೆಕ್ಟ್ ಇರಬಹುದು, ತಾವು ಎಷ್ಟು ಹಣ ಕೊಡಬೇಕು? ಇವತ್ತು ಪಿಡಬ್ಲ್ಯೂಡಿಯಲ್ಲಿ ಕಳೆದ ವರ್ಷ ಆಗಿರುವ ಕೆಲಸ, ಕಾಮಗಾರಿಗಳಿಗೆ ಎಷ್ಟು ಹಣ ಕೊಡಬೇಕು? ಜಿಲ್ಲಾ ಪಂಚಾಯತ್‌ಗಳಿಗೆ ಎಷ್ಟು ಹಣ ಕೊಡಬೇಕು? ಸನ್ಮಾನ್ಯ ಯಡಿಯೂರಪ್ಪನವರು ರೆಫರ್ ಮಾಡಿ ಹೇಳಿದರು. ಹೋದ ವರ್ಷ ಇವರು ಒಂದು ಗಂಡಾಂತರ ಸೃಷ್ಟಿಸಿದ್ದಾರೆ. ಎಲ್ಲಾ ಜಿಲ್ಲಾ, ತಾಲ್ಲೂಕು ಪಂಚಾಯತ್‌ಗಳ ಹೆಡ್ ಆಫ್ ಅಕೌಂಟ್‌ನಲ್ಲಿದ್ದ ಹಣವನ್ನು ಟ್ರೆಜರಿಯಿಂದ ವಿಥ್‌ಡ್ರಾ ಮಾಡಿದ್ದಾರೆ. ಇಷ್ಟು ಕೋಟಿಯಾಗಿದೆ ಎಂದು ಶಾಸನ ಸಭೆಯಲ್ಲಿ ಹೇಳಲಿಲ್ಲ. ಏಕೆ ಮಾಡಿದರು ಎಂಬುದನ್ನು ಹೇಳಲಿಲ್ಲ. ಮಾರ್ಚ್ 31ಕ್ಕೆ ಖರ್ಚು ಮಾಡಲಿಲ್ಲ, ಹಾಗಾಗಿ ವಿಥ್‌ಡ್ರಾ ಮಾಡಿದ್ದೇವೆಂದು ಹೇಳುತ್ತಾರೆ. ವಿಥ್‌ಡ್ರಾ ಮಾಡಬೇಕಾದರೆ ತಾಲ್ಲೂಕು ಪಂಚಾಯತ್ ಅಥವಾ ಜಿಲ್ಲಾ ಪಂಚಾಯತ್‌ಗಳ ಸ್ವಂತ ಹಣ, ಅದು ಬಾಡಿಗೆಯಿಂದ ಬಂದಿದ್ದೋ, ಮರ ಮಾರಿ ಬಂದಿದ್ದೋ, ಸೇವಿಂಗ್ಸ್‌ನಿಂದ ಬಂದಿದ್ದೋ, ಅದನ್ನೂ ವಿಥ್‌ಡ್ರಾ ಮಾಡಿದ್ದಾರೆ. ರಾಜ್ಯ ಸರ್ಕಾರದಲ್ಲಿ ಹಣವಿಲ್ಲದೆ, ಆ ಸಂಸ್ಥೆಗಳ ಸ್ವಂತ ಹಣವನ್ನೂ ವಿಥ್‌ಡ್ರಾ ಮಾಡಿದ್ದಾರೆ. ಸನ್ಮಾನ್ಯ ಪ್ರಕಾಶ್‌ರವರು ಈ ವಿಕೇಂದ್ರೀಕೃತ ವ್ಯವಸ್ಥೆಗೆ ಗಹನವಾದ, ಬಹಳ ಒತ್ತಾಸೆ ಇಟ್ಟುಕೊಂಡಿರುವ ಮಂತ್ರಿಗಳು ತಾವು. ಇವತ್ತು ತಾವು ಇಲ್ಲಿ ಕುಳಿತಿದ್ದಾರೆ. ಆದರೆ, ಆ ಸಂಸ್ಥೆಗಳು ಇನ್ನೂ ಇವೆಯೇ? ಅಲ್ಲಿ ಕೊಡಲಿಕ್ಕೇನಾದರೂ ಹಣವಿದೆಯೇ? ತಾಲ್ಲೂಕು ಪಂಚಾಯತ್‌ನಲ್ಲಿ ಕೆಲಸ ಮಾಡುವುದಕ್ಕೆ ಅಧಿಕಾರಗಳಿದ್ದಾರೆಯೇ? ಅದಕ್ಕೇನು ಉತ್ತರ ಹೇಳಬೇಕು? ಆಯಿತು. ಹಣವನ್ನು ಹಿಂದಕ್ಕೆ ತೆಗೆದುಕೊಂಡಿರಿ. ವಾಪಸ್ಸು ಯಾವಾಗ ಕೊಡುತ್ತೀರಿ? ಎಷ್ಟು ಹಣ ತೆಗೆದುಕೊಂಡಿರಿ? ಏಕೆ ತೆಗೆದುಕೊಂಡಿರಿ? ಹೇಳುವವರು ಯಾರೂ ಇಲ್ಲ. ನಾವು, ಈ ಆಯವ್ಯಯದಲ್ಲಿ ಅದರ ಬಗ್ಗೆ ಬರುತ್ತದೆಂದು ನೋಡುತ್ತಿದ್ದೇವೆ. ತುಮಕೂರು ಜಿಲ್ಲಾ

ಪಂಚಾಯತ್‌ನಲ್ಲಿ ನನಗೆ ತಿಳಿದ ಮಟ್ಟಿಗೆ ಬಹುಶಃ 11 ಕೋಟಿ ರೂಪಾಯಿಗಳ ಇಂಥ ಹಣವನ್ನು ಕಳೆದುಕೊಂಡಿದೆ. ನನ್ನ ತಾಲ್ಲೂಕು ಪಂಚಾಯತ್‌ನಲ್ಲಿ ಕೂಡ, ಬಾಡಿಗೆಯಿಂದ ಬಂದ ಹಣವನ್ನು, ಟ್ರೆಜರಿಯಲ್ಲಿ ಇಟ್ಟಿದ್ದೆವು, ಅದೂ ಕೂಡ ವಿಥ್‌ಡ್ರಾ ಆಗಿದೆ. ಇದನ್ನು ಸರ್ಕಾರದ ಲೆಕ್ಕಕ್ಕೆ ತರಲೇ ಇಲ್ಲ. ಏಕೆ ತಂದಿರಿ? ಯಾವಾಗ ಕೊಡುತ್ತೀರಿ? ಅದನ್ನು ಏನು ಹೋದ ವರ್ಷದ ಲೆಕ್ಕಕ್ಕೆ ಕೊಡುತ್ತೀರಾ? ಈ ವರ್ಷದ ಲೆಕ್ಕಕ್ಕೆ ಕೊಡುತ್ತೀರಾ? ಗೊತ್ತಿಲ್ಲ. ನಾವು ಇವತ್ತು ಸಂಘ–ಸಂಸ್ಥೆಗಳನ್ನು ಕ್ರಿಯೇಟ್ ಮಾಡಿದ್ದೇವೆ. ಎರಡನೆಯದಾಗಿ, ನಾನು ಅದಕ್ಕೇ ಹೇಳಿದೆ, ಭಾಷಣವನ್ನು ಬಹಳ ಚೆನ್ನಾಗಿ ನಾವು ಶಾಸನ ಸಭೆಯಲ್ಲಿ ಮಾಡುತ್ತೇವೆ. ಅಲ್ಲಿ ಏನಾಗಿದೆ ಗೊತ್ತಿಲ್ಲ. ಸನ್ಮಾನ್ಯ ಸಿದ್ದರಾಮಯ್ಯನವರು ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಜಾತ್ಯತೀತ ಜನತಾದಳದ ಪ್ರಣಾಳಿಕೆಯ ಸೃಷ್ಟಿಕರ್ತರು ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್‌ರವರೇ ಎಂದು ಏಕೆಂದರೆ ಭಾಷೆ, ಒಕ್ಕಣೆ, ಸಾಹಿತ್ಯ ಇವುಗಳಿಂದ ಅದು ಎಲ್ಲಿಂದ ಬಂತೆಂದು ನಮಗೆ ಅರ್ಥವಾಗುತ್ತದೆ. ಏನೇನು ಹೇಳಿದ್ದೀರಿ, ಜನರ ಮುಂದೆ ನಿಂತುಕೊಂಡು, ನಾವು ಅಧಿಕಾರಕ್ಕೆ ಬಂದರೆ, ಇಂಥಿಂಥ ಕೆಲಸ ಮಾಡುತ್ತೇವೆ, ಇಂಥಿಂಥ ಅನುಕೂಲಗಳನ್ನು ಮಾಡುತ್ತೇವೆಂದು ಪ್ರಮಾಣ ಮಾಡಿದ್ದೀರಿ. ಎಷ್ಟು ಪರ್ಸೆಂಟ್ ಮಾಡಿದ್ದೀರಿ? ಆ ಪ್ರಣಾಳಿಕೆಯಲ್ಲಿ 6 ಪರ್ಸೆಂಟ್‌ಗೆ ಬಡ್ಡಿ ತರುತ್ತೇವೆಂದು ಹೇಳುವುದನ್ನು ಬಿಟ್ಟರೆ, ಬೇರೆ ಏನನ್ನು ನೀವು ಇವತ್ತು ಅನುಷ್ಠಾನಕ್ಕೆ ತಂದಿದ್ದೀರಿ? ತಾವೇ ಸ್ಪಷ್ಟವಾಗಿ ಹೇಳಿ. 3 ರೂ. ಗೆ ಅಕ್ಕಿ ಎನ್ನುವುದಕ್ಕೆ ನಾನು ಬರುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : 3 ರೂ. ಗೆ ಅಕ್ಕಿ, ಆನ್‌ಲೈನ್ ಲಾಟರಿ ನಿಷೇಧ ಎಲ್ಲಾ ಇದೆ. ಸಾರಾಸಗಟಾಗಿ ಹೇಳಿದರೆ ಹೇಗೆ? ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಬಹಳ ಅನುಭವವಿರುವವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಚಿದಂಬರರಂರವರು ಪಾರ್ಲಿಮೆಂಟ್‌ನಲ್ಲಿ ಮಾಡಿರುವ ಭಾಷಣದ ಕಾಪಿಯನ್ನು ಇಲ್ಲಿ ಇಟ್ಟುಕೊಂಡಿದ್ದೇನೆ. 3 ರೂ. ಹೇಗಾಯಿತು? ಅಂತ್ಯೋದಯ ಸ್ಕೀಂ ಯಾರದ್ದು ಎಂದು ಮಾತನಾಡುವುದಕ್ಕೆ ಬರುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಹಿಂದೆ ಯಾರೂ 3 ರೂ. ಗೆ ಅಕ್ಕಿ ಕೊಟ್ಟಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವೇ ಮಾಡಿರುವುದೋ, ಅಲ್ಲವೋ ಎಂದು ಹೇಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾಡಬೇಕಿರುವುದು ಹೇಳಿ. ಮಾಡಿರುವ ಬಗ್ಗೆ ಅಭಿನಂದಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಅಧ್ಯಕ್ಷರನ್ನು ಕೇಳಿ ಮಾತನಾಡಿ. ನಿಮ್ಮ ಸರ್ಕಾರದ್ದು, ನಿಮ್ಮ ಪಕ್ಷದ್ದು ಹೊಗಳಿಕೊಳ್ಳಿ. ನಾನು ನಿಮ್ಮ ಪಕ್ಷದ್ದು ಹೊಗಳಲು ಇಲ್ಲಿ ನಿಲ್ಲಬೇಕೇ? ನನ್ನ ಜನ ಇಲ್ಲಿ ನಿಂತುಕೊಂಡು ನಿಮ್ಮ ಪಾರ್ಟಿ ಹೊಗಳಲು ನನ್ನನ್ನು ಕಳುಹಿಸಿದ್ದಾರೆಯೇ?

ಶ್ರೀ ಆರಗ ಜ್ಞಾನೇಂದ್ರ : ನಿರುದ್ಯೋಗ ಭತ್ಯೆ ಇತ್ತಲ್ಲಾ, ಅದನ್ನು ಸೇರಿಸಬಹುದಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ತಮಗೆ ಸ್ಪಷ್ಟವಾಗಿ ಕೇಳುತ್ತೇನೆ.....

ಶ್ರೀ ಎನ್. ಚಲುವರಾಯಸ್ವಾಮಿ : ಅದು 5 ವರ್ಷದ ಪ್ರಣಾಳಿಕೆ, ಕಾರ್ಯಕ್ರಮ, ಒಂದು ವರ್ಷದ್ದಲ್ಲ. ಜೊತೆಗೆ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಜನ ನಮಗೆ ಪೂರ್ಣವಾಗಿ ಸರ್ಕಾರ ರಚಿಸುವುದಕ್ಕೆ ಅಧಿಕಾರ ಕೊಟ್ಟಿದ್ದರೆ, ನಮ್ಮ ಎಲ್ಲಾ ಪ್ರಣಾಳಿಕೆಯನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೆವು.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ನಮ್ಮ ನೆರವಿಗೆ ಬರಬೇಕು. ಹೀಗೆ ಇಂಟರಫ್ಟ್ ಮಾಡುವುದು, ಟೈಂ ಸಾಕಾಗುವುದಿಲ್ಲ ನೀವು ಕುಳಿತುಕೊಳ್ಳಿ ಎಂದು ಅವರು ಹೇಳುವುದು ಅಲ್ಲ. ನೀವು ತೆಗೆದುಕೊಂಡ ಕಾಲವನ್ನು ಗುರುತು ಮಾಡಿ, ಬಿಟ್ಟು ಬಿಡಬೇಕಾಗುತ್ತದೆ. ನೀವೆಲ್ಲಾ ಸ್ಟಾಪ್ ಕ್ಲಾಕ್ ಇಟ್ಟಿದ್ದೀರಿ. ಇದು ನನ್ನ ಭಾಷಣ. ನಮ್ಮದಾದ ಮೇಲೆ ನಿಮ್ಮ ಭಾಷಣ ಇರುತ್ತದೆ. ನಿಮ್ಮ ಪಕ್ಷದವರೂ ಮಾತನಾಡುವವರಿದ್ದಾರೆ. ಅವರು ಹೇಳುತ್ತಾರೆ. ಆದರೆ, ನನ್ನದು ದುರ್ದೈವ ಎಂದರೆ, ಮಾನ್ಯ ರಾಜಣ್ಣನವರು ಎದ್ದು ಮಾತನಾಡುತ್ತಾರೆ. ಅವರ ಮನೆಯವರು ಅಲ್ಲಿ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾಗಿದ್ದಾರೆ. ಒಂದೂ ಬಿಲ್ ಪಾಸ್ ಮಾಡುವುದಕ್ಕೆ ಆಗಿಲ್ಲ. ಇವರು ಅಫೆಕ್ಸ್ ಬ್ಯಾಂಕ್ ಛೇರ್ಮನ್ ಆಗಿದ್ದಾರೆ. ಎಲ್ಲಾ ಸೊಸೈಟಿಗಳು ಸ್ಟ್ಯಾಂಡ್‌ಸ್ಟಿಲ್‌ಗೆ ಬಂದಿವೆ. ಅವರು ಎದ್ದುನಿಂತು ಮಾತನಾಡುವುದೆಂದರೆ, ದುರ್ದೈವ. ಇರಲಿ ಬಿಡಿ, ಐ ಸ್ಟಾಪ್ ಅಟ್ ದಟ್.

3.40 ಪಿ.ಎಂ

ಶ್ರೀ ಕೆ.ಎನ್. ರಾಜಣ್ಣ : ಎಲ್ಲಾ ಸ್ಟ್ಯಾಂಡ್‌ಸ್ಟಿಲ್ ಆಗಿದೆ ಅದು ಇದು ಎನ್ನತಕ್ಕಂಥವಾದ ಸರಿಯಾದುದಲ್ಲ. ಚೆನ್ನಾಗಿ ಕೆಲಸ ನಡೆಯುತ್ತಾ ಇವೆ, ಅದರ ಬಗ್ಗೆ ತಪ್ಪು ಮಾಹಿತಿ ಸದನದಿಂದ ಹೊರಗಡೆ ಹೋಗತಕ್ಕಂಥ ಅವಕಾಶವಾಗುವುದು ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಖಂಡಿತ ಇಲ್ಲ. ಒಂದೇ ಒಂದು ಅಕ್ಷನ್ ಫ್ಲಾನ್ ತುಮಕೂರು ಜಿಲ್ಲಾ ಪಂಚಾಯತ್‌ದ್ದು ಅಪ್ರೂವೆಲ್ ಆಗಿಲ್ಲ. I am serious. ಏತಕ್ಕೆಂದರೆ ನಿಮ್ಮ ಹತ್ತಿರ ಹಣವಿಲ್ಲ, ನಾನೂ ಕೂಡ ಒಬ್ಬ ಎಂಎಲ್‌ಎ, ತಾಲ್ಲೂಕಿನಿಂದ ಕುಳಿತುಕೊಂಡು ಮಾಡಿರುವ ಯಾವ ಅಕ್ಷನ್ ಫ್ಲಾನ್ ಅಪ್ರೂವೆಲ್ ಆಗಿದೆ? ನಾನು ರಾಜಕೀಯ ಕಾರಣಕ್ಕಾಗಿ ಮಾತನಾಡುತ್ತಿಲ್ಲ. ಇವತ್ತು ಸರ್ಕಾರ ಅಲ್ಲಿದ್ದಂಥ ಹಣವನ್ನು ಮಾರ್ಚ್‌ನಲ್ಲಿ ಎಲೆಕ್ಷನ್ ಕಂಟೆಕ್ಟ್‌ನಲ್ಲಿ ಏನು ಹಿಂದಕ್ಕೆ ತಂದಿದ್ದಾರೆ. ಒಂದು ತಾಲ್ಲೂಕು ಪಂಚಾಯತ್, ಒಂದು ಜಿಲ್ಲಾ ಪಂಚಾಯತ್ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಮಾತು ಏನಾದರೂ ಆಡಬಹುದು, ಆತ್ಮ ಸಾಕ್ಷಿ ಒಂದು ಇರುತ್ತದೆ ಅಲ್ಲವೆ? ಪಕ್ಷವನ್ನು ನೀವು ಡಿಫೆಂಡ್ ಮಾಡಿಕೊಳ್ಳಿ, ಬೇಡ ಅನ್ನುವುದಿಲ್ಲ. ಯಾವುದೇ ಜಿಲ್ಲಾ ಪಂಚಾಯತ್ ಇವತ್ತು ರಿಸೋರ್ಸ್‌ನ್ನು ಇಟ್ಟುಕೊಂಡಿಲ್ಲ ಮಾರ್ಚ್ ಎಂಡ್‌ನಲ್ಲಿ ಸರ್ಕಾರ ವಿತ್‌ಡ್ರಾ ಮಾಡಿದೆ, through a Government Order, through treasury orders. ಇದನ್ನು ಏಕೆ ನೀವು ಅಲ್ಲಗೆಳೆಯುತ್ತೀರಿ? ಪಕ್ಷ ಬಿಟ್ಟುಬಿಡಿ, ಸುಮಾರು 700–800 ಕೋಟಿ ರೂಪಾಯ ಹಣ ಅದು, ನೀವು ಒಂದು ವ್ಯವಸ್ಥೆಯ ಬಗ್ಗೆ ಮಾತನಾಡುವಾಗ ಪಕ್ಷವನ್ನೇ ಇಟ್ಟುಕೊಂಡು ಮಾತನಾಡುವುದಾದರೆ ಅದು ನಿಮ್ಮಿಷ್ಟ, ನಿಮಗೆ ಬಿಟ್ಟು ಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಈ ಸರ್ಕಾರದ ನೆರವಿನಲ್ಲಿ ಎಲ್ಲಾ ಸಂಘ ಸಂಸ್ಥೆಗಳು ಹಾಳಾಗಿ ಹೋಗುತ್ತಿವೆ. ಇನ್ನು ಟ್ಯಾಕ್ಷೇಷನ್ ವಿಷಯಕ್ಕೆ ಬಂದು ನಾನು ಅಮೇಲೆ ಬೇರೆ ಇಲಾಖೆಗಳ ಬಗ್ಗೆ ಎರಡು ಮಾತನಾಡುತ್ತೇನೆ. ಬಹಳ ಮಾತನಾಡಿದ್ದಾರೆ. ನಾನು ಟ್ಯಾಕ್ಸ್‌ನ್ನು ಸರಳೀಕರಣ ಮಾಡುತ್ತೇನೆ, we are marching ahead to VAT system, ಇದರಿಂದ ಎಲ್ಲಾ ನಿವಾರಣೆಯಾಗುತ್ತದೆ. ಏನು ರೇಟ್ ಆಫ್ ಟ್ಯಾಕ್ಸೇಷನ್ ಅಥವಾ ಸ್ಲ್ಯಾಬ್ಸ್‌ನ್ನು ಟ್ಯಾಕ್ಸಿಂಗ್ ಮ್ಯೆಕಾನಿಸಂ ಇತ್ತು ಕಡಿಮೆ ಮಾಡುತ್ತೇವೆ, ಮಿಡೆಲ್ಲಿ ಹೇಳಿದ್ದಿರೆ ಹಾನ್‌ಸ್ಟ್ ಆಗಿ ನಾನು ಸನ್ಮಾನ್ಯ ಅರ್ಥ ಸಚಿವರಲ್ಲಿ ಕೇಳುತ್ತೇನೆ. ಯಾವುದು ಪ್ರಾಯಾರಿಟಿ ಸೆಕ್ಟಾರ್? ಯಾವುದರಲ್ಲಿ ಟ್ಯಾಕ್ಸ್‌ನ್ನು ಕಡಿಮೆ ಮಾಡುಬೇಕಾಗಿತ್ತು? ಯಾವುದಕ್ಕೆ ಟ್ಯಾಕ್ಸ್‌ನ್ನು ಹಾಕಬೇಕಾಗಿತ್ತು? ವಿವೇಚನೆ ಇಟ್ಟುಕೊಂಡು ಇವತ್ತು ಏನಾದರೂ ಆ ಕೆಲಸ ಆಗಿದೆಯೇ? ಅಧ್ಯಕ್ಷರೇ, ನಾನು ಓದಿ

ತಮಗೆ ಹೇಳುತ್ತೇನೆ, 13 ಪರ್ಸೆಂಟ್ ಇರುವುದು 12ಕ್ಕೆ ತುರುವುದು, 2 ಇರುವುದು 4ಕ್ಕೆ ತೆಗೆದುಕೊಂಡು ಹೋಗುವುದು. ಸ್ವಾಮಿ, ಯಾರಾದರೂ ಒಂದು ರಾಜ್ಯ ಸರ್ಕಾರಕ್ಕೆ ಬಜೆಟ್ ಇಟ್ಟರೆ, ಯಾವುದು ಜನೋಪಯೋಗಿ, ಯಾವುದು ಬಡವರ ಕಲ್ಯಾಣಕ್ಕೆ, ಯಾವುದು ದೀನದಲಿತರ ಕಲ್ಯಾಣಕ್ಕೆ ಬರುತ್ತದೆ ಅದಕ್ಕೆ ಕಡಿಮೆ ಟ್ಯಾಕ್ಸ್ ಹಾಕುವುದು ವಾಡಿಕೆ. ಯಾರು ಶ್ರೀಮಂತರು ಅಥವಾ affordable section of the society - ಇರುತ್ತಾರೆ ಅವರಿಗೆ ಜಾಸ್ತಿ ಹಾಕುವುದು. ಸ್ಲ್ಯಾಬೇ ನಾನು ಕಡಿಮೆ ಮಾಡುತ್ತೇನೆ, 2 ರಿಂದ 4 ರಿಂದ 5 ರಿಂದ 6 ರಿಂದ ಇರುವುದನ್ನು 4 ಮಾಡುತ್ತೇನೆ, 2 ಮಾಡುತ್ತೇನೆ, 6 ಮಾಡುತ್ತೇನೆಂದು ಭಾಷಣ ಮಾಡುತ್ತಾ, 2 ಇರುವುದನ್ನು 4 ಮಾಡುವುದು, 4 ಇರುವುದನ್ನು 2 ಮಾಡುವುದು, ಇದು ಘನತೆ ತರುವಂಥ ಕೆಲಸವಲ್ಲ. ಅವರು ಏನು ಐಟಂಗಳಲ್ಲಿ ಹೇಳಿಕೊಂಡು ಬಂದಿದ್ದಾರೆ, ಬಹುಶಃ ಅವರು ನಿಜವಾಗಲೂ ತೆಗೆದು ನೋಡಿಲ್ಲ. ಸ್ಲ್ಯಾಬ್ ಅಷ್ಟೊಂದು 2, 3, 4, 5, 6, 13, 14, ಆಗಬಾರದು ಎನ್ನುವ ಕಾರಣಕ್ಕೆ, 13 ಇರುವುದನ್ನು 12 ಮಾಡಿದಿರಿ. ಇದು ಬಿಟ್ಟರೆ ಯಾವ ಪುರುಷಾರ್ಥವೂ ಅದರಿಂದ ಸಾಧನೆಯಾಗಿಲ್ಲ. ನೀವು ಭಾಷಣದಲ್ಲಿ ಏನು ನಾನು ಕನ್‌ಸೇಷನ್ ಕೊಟ್ಟಿದ್ದೇನೆ, ಎಂದು ಹೇಳಿದಿರಿ ಅದು ಯಾವುದೇ ಸೆಕ್ಟಾರ್ ಒಂದು ಪಾಪ್ಯೂಲರ್ ಗೌರ್ನಮೆಂಟ್‌ನಿಂದ ಕನ್‌ಸೆಷನ್ ಅನ್ನು ನಿರೀಕ್ಷೆ ಮಾಡುವಂಥ ಕ್ಷೇತ್ರ–ವಲ್ಲ. I challenge, ನೀವು ಪುಸ್ತಕ ತೆಗೆದು ಓದಬೇಕು, ಸನ್ಮಾನ್ಯ ಪ್ರಕಾಶ್‌ರವರು ಹಿರಿಯ ಸದಸ್ಯರು ತಾವು ಓದಿ, ನೀವು ಯಾವ ಇಲಾಖೆಯಲ್ಲಿ ನಿಮ್ಮ ಯಾವ ಐಟ್‌ಂಗಳಲ್ಲಿ ಟ್ಯಾಕ್ಸ್ ರೆಡ್ಯೂಸ್ ಮಾಡಿದಿರಿ, whether it was warranted? ಬೇಕಿತ್ತಾ? ಯಾವ ಐಟಂಗಳಲ್ಲಿ ಜಾಸ್ತಿ ಮಾಡಿದಿರಿ, ಅನ್ಯಾಯ ಅಲ್ಲವೆ? ಏಕೆ ಸ್ವಾಮಿ ನೀವು ಟ್ಯಾಕ್ಸನ್ನು ಸರಳೀಕರಿಸುವ ಒಂದೇ ಉದ್ದೇಶಕ್ಕೆ ಯಾರೋ ಪಾಪ ನಾನ್ ಟ್ಯಾಕ್ಸೆಬಲ್ ಐಟಂಗೆ ನೀವು, ನಾವು ವ್ಯಾಟ್‌ಗೆ ವೈಡರ್ ಬೇಸ್‌ನಲ್ಲಿ ತರುತ್ತೇನೆಂದು ಟ್ಯಾಕ್ಸ್ ಹಾಕುವುದು, ಇನ್ನೊಂದು ಕಡೆ ಯಾವನೋ ರೆಫ್ರಿಜರೇಟರ್ ಇಟ್ಟುಕೊಂಡಿರುವವನಿಗೆ, ಮತ್ತೊಂದು ಮಾಡುವವನಿಗೆ, ಮಗದೊಂದು ಮಾಡುವವರಿಗೆ ಟ್ಯಾಕ್ಸ್ ರೆಡ್ಯೂಸ್ ಮಾಡುವುದು, ಐಟ್‌ಂ ನಂಬರ್ ಅಷ್ಟರಲ್ಲಿ ಇಷ್ಟು ಪರ್ಸೆಂಟ್ ಟ್ಯಾಕ್ಸ್ ಇದೆ ಎಂದು ಮಾಡುವುದುನ್ನು ಇದೊಂದು ಬಜೆಟ್ ಅನ್ನು ಅಸೆಂಬ್ಲಿಯಲ್ಲಿ ಇಡುತ್ತೇವೆಂದು ಹೇಳಿದರೆ ನಾವು ಏನು ಹೇಳಬೇಕು ಎಂಬುದು ನಮಗೆ ಗೊತ್ತಾಗಿಲ್ಲ. ನಾವು ಬೇಕಾದಷ್ಟು ಕ್ಷೇತ್ರಗಳಲ್ಲಿ ದುಡಿದು ಬಂದಿರುತ್ತೇವೆ, ಈ ಶಾಸನ ಸಭೆ ಬಜೆಟ್ ಪಾಸ್ ಮಾಡುತ್ತದೆ ಎಂದರೆ ಇಲ್ಲಿರುವ ಎಲ್ಲರ ಅನುಭವವನ್ನು ಹಾಗೂ ಇಲ್ಲಿರುವ ಎಲ್ಲರ ಸಾರಾಂಶ ತಿಳಿದುಕೊಂಡು ಫೈನಲ್ ಮಾಡಬೇಕು. ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಬೇಡಿಕೆ ಅಥವಾ ಒಂದು ಕೋರಿಕೆಯನ್ನು ಇಡುತ್ತೇನೆ. ದಯಮಾಡಿ ಅವರು ಈ ಕ್ಷಣ ಯೋಚಿಸಬೇಕು. ಈ ವ್ಯಾಟ್ ಸಿಸ್ಟಂಗೆ ಹೋಗುತ್ತೇವೆ ಎನ್ನುವ ಉಭ್ರಮೆಯಲ್ಲಿ ಟ್ಯಾಕ್ಸ್‌ನ್ನು ಆ ಕಡೆ ಈ ಕಡೆ ಮಾಡುತ್ತಿರುವುದು ತಪ್ಪು. ಯಾರ ಸ್ವಾಮಿ ವ್ಯಾಟ್ ಸಿಸ್ಟಂಗೆ ವಿರುದ್ಧವಾಗಿ ಇದ್ದದ್ದು? It was only your government. ಮೊದಲು ಇದ್ದಂಥ ಎನ್‌ಡಿಎ ಸರ್ಕಾರ ವ್ಯಾಟ್ ಸಿಸ್ಟಂ ಕಡೆ ಪ್ರಪೋಸ್ ಮಾಡುತ್ತೇವೆಂದಾಗ, ನೇಷನ್‌ವೈಡ್ ಪ್ರೊಟೆಸ್ಟ್ ಮಾಡಿಸಿದ್ದು ಯಾರು? ನಿಮ್ಮ ನಾಯಕರೇ, ಕಾಂಗ್ರೆಸ್ ನಾಯಕರೇ. ಇವತ್ತು ಅದರ ಬಗ್ಗೆ ಅಷ್ಟೊಂದು ಮಾತನಾಡುತ್ತಿರುವವರು ಯಾರು? ನೀವೇ. ಇಡೀ ಇಂಡಿಯಾ ದೇಶದಲ್ಲಿ ವ್ಯಾಟ್ ಸಿಸ್ಟಂ ಜಾರಿಗೆ ತರಬೇಕು ಎಂದಿದ್ದ ದಿವಸ ಪ್ರೊಟೆಸ್ಟ್ ಸ್ಟಾರ್ಟ್ ಆಗಿದ್ದು ಕಾಂಗ್ರೆಸ್ ರೂಲ್ಡ್ ಸ್ಟೇಟ್ಸ್‌ಗಳಲ್ಲಿ ಏಕೆ? ಇವತ್ತು ನೀವು ಬರುತ್ತಿದ್ದ ಹಾಗೆ ಏಕೆ ಬಂದಿರಿ? ನಾನು ಇಲ್ಲಿ ಓದುತ್ತೇನೆ, ನನ್ನ ಹತ್ತಿರ ಮಾಹಿತಿ ಇದೆ, It is the same government

which is propagating VAT system now. What made them to propagate now? ಕಾರಣ ಬೇಕಲ್ಲವೆ? ನಿನ್ನೆ ವಿರೋಧಿಸಿ ಇವತ್ತು ಪರ ಮಾತನಾಡಲಿಕ್ಕೆ. ಎರಡನೇಯದಾಗಿ ಇದೊಂದು ಸಾಮಾನ್ಯ ಪರಿಜ್ಞಾನ. ಕರ್ನಾಟಕ ಆದರಲ್ಲೂ ಬೆಂಗಳೂರು ಸುತ್ತ ಬೇರೆ ರಾಜ್ಯಗಳ ಗಡಿನಲ್ಲಿ ಬಹಳ ಹತ್ತಿರದಲ್ಲಿದೆ. ಇದನ್ನು ನೀವು ಒಪ್ಪಬೇಕು. ನೀವು ಈ ರಾಜ್ಯಕ್ಕೆ ಬರುವ ಕಾರುಗಳ ಮೇಲೆ ಟ್ಯಾಕ್ಸ್‌ನ್ನು ರಿಯಾಯಿತಿ ಕೊಡುತ್ತೀರಿ, ಹೊರಗಡೆ ಕೊಂಡು ಕೊಂಡು ಈ ರಾಜ್ಯಕ್ಕೆ ತರುವ ಕಾರುಗಳ ಮೇಲೆ ರಿಯಾಯಿತಿ ಕೊಡುತ್ತೀರಿ, ನೀವು ಈ ರಾಜ್ಯದಲ್ಲಿ ಡೀಸೆಲ್ ಮೇಲೆ ಸೆಸ್ ಜಾಸ್ತಿ ಮಾಡುತ್ತೀರಿ. ಇದು ವೈಜ್ಞಾನಿಕವಾಗಿದೆಯೇ ಎಂದು ನಾನು ನಿಮ್ಮನ್ನು ಅಂದರೆ ಸರ್ಕಾರ ನಡೆಸುವವರನ್ನು ಕೇಳಬೇಕಲ್ಲವೆ? ಸನ್ಮಾನ್ಯ ಅಧ್ಯಕ್ಷರೇ, ಒಂದೂವರೆ ರೂಪಾಯಿ ವ್ಯತ್ಯಾಸ ತಮಿಳುನಾಡಿನ ಯಾವುದೇ ಪೆಟ್ರೋಲ್ ಬಂಕ್‌ನಲ್ಲಿ ಡೀಸೆಲ್ ಹಾಕಿಸುವವರಿಗೆ, ಕರ್ನಾಟಕದ ಪೆಟ್ರೋಲ್ ಬಂಕನಲ್ಲಿ ಡೀಸೆಲ್ ಹಾಕಿಸುವವರಿಗೆ ಒಂದೂವರೆ ರೂಪಾಯಿ ಪರ್ ಲೀಟರ್‌ಗೆ ವ್ಯತ್ಯಾಸ. ಯಾರಾದರೂ ಆ ಕಡೆಯಿಂದ ದೊಡ್ಡ ವಾಹನಗಳಲ್ಲಿ ಬರುತ್ತಾರೆಂದರೆ, ಕರ್ನಾಟಕದ ಆ ಕಡೆ ಬಾರ್ಡ್‌ನಲ್ಲಿ ತುಂಬಿಸಿಕೊಳ್ಳುತ್ತಾರೆ, ರಾಜ್ಯದಲ್ಲಿ ಅಡ್ಡಾಡುತ್ತಾರೆ, ವಾಪಸ್ಸು ಹೋಗಬೇಕಾದರೆ ಅಲ್ಲಿಯವರೆಗೆ ಹೋದರೆ ಸಾಕು ಎಂದು ಟ್ಯಾಂಕ್ ಅನ್ನು ಡ್ರೈ ಮಾಡಿಕೊಂಡು ಹೋಗಿ ಅಲ್ಲಿ ಹೋಗಿ ಹಾಕಿಸಿಕೊಳ್ಳುತ್ತಾರೆ. ಎಷ್ಟು ಸೆಸ್ ಕಳೆದುಕೊಂಡಿದ್ದೀರಿ? ಎಷ್ಟು ಟ್ಯಾಕ್ಸ್‌ನ್ನು ರಾಜ್ಯಕ್ಕೆ ಕಳೆದುಕೊಳ್ಳುತ್ತಿದ್ದೀರಿ? ಎಷ್ಟು ಸಲ ನೀವು ಡೀಸೆಲ್ ಮೇಲೆ ಸೆಸ್ ಹಾಕುತ್ತೀರಿ? ಜನ ಸಾಮಾನ್ಯ ಇವತ್ತು ಈ ದೇಶದಲ್ಲಿ ಇಂಧನಗಳಿಗೆ ಕೊಡುತ್ತಿರುವ ತೆರಿಗೆನಲ್ಲಿ ತಲೆ ಎತ್ತಿ ಬದುಕುಲಾರದ ಸ್ಥಿತಿಗೆ ಬಂದಿದ್ದಾನೆ. ಕೇಂದ್ರ ಸರ್ಕಾರದವರು ಪದೇ ಪದೇ ಪದೇ ಡೀಸೆಲ್, ಪೆಟ್ರೋಲ್, ಅಡಿಗೆ ಅನಿಲದ್ದು ರೇಟ್ ಅನ್ನು ಜಾಸ್ತಿ ಮಾಡಿಕೊಂಡು ಹೋಗಿ ಎಂದು ಇದಕ್ಕೆ ಕೊನೆ ಎನ್ನುವ ಸ್ಟೇಜ್‌ನಲ್ಲಿ ರಾಜ್ಯ ಸರ್ಕಾರವೂ ಅದರ ಮೇಲೆ ಸೆಸ್ ಹಾಕುವ ಸ್ಥಿತಿ ನಿರ್ಮಾಣ ಮಾಡಿದರೆ, ಹೇಗೆ ಬದುಕುವುದು? ಹಾಗಾದರೆ ಸುಳ್ಳಾ? ನೀವು ಹೇಳಬೇಕು, ಇಲ್ಲಿರುವ ಅನುಭವಸ್ಥ ಸದಸ್ಯರು ತಮಿಳುನಾಡು ಅಥವಾ ಆಂಧ್ರಪ್ರದೇಶಕ್ಕೆ ಹೋಗುವ ಯಾವುದಾದರೊಂದು ದೊಡ್ಡ ವೇಹಿಕಲ್ ಇವತ್ತು ಇಲ್ಲಿ ನಮ್ಮಲ್ಲಿ ಬೆಂಗಳೂರಿನಲ್ಲಿ ಫ್ಯೂಯಲ್ ಮಾಡಿಕೊಂಡು ಹೋಗುತ್ತಿದ್ದಾನಾ? ಇಲ್ಲ. ಎರಡನೇಯದಾಗಿ, ತಮಗೆ ಗೊತ್ತಿರುವಂತೆ ಈ ರಾಜ್ಯದಲ್ಲಿ ವಾಹನಗಳನ್ನು ಕೊಳ್ಳುವುದು ಬಹಳ ದುಬಾರಿ. ಈ ರಾಜ್ಯದ ತೆರಿಗೆ ಜಾಸ್ತಿ, ಮೊದಲು ಎಲ್ಲಾ ಗೋವಾಕ್ಕೋ, ಪಾಂಡೀಚೆರಿಗೋ, ಮಹಾರಾಷ್ಟ್ರಕ್ಕೋ ವೆಹಿಕಲ್ ಪರ್ಚೇಸ್ ಮಾಡಲಿಕ್ಕೆ ಹೋಗುತ್ತಿದ್ದರು. ಆಗ ನಾವು ಇಲ್ಲಿ ಎಲ್ಲಾ ಮಾತನಾಡಿದೆವು, ಬಹಳ ಅನ್ಯಾಯವಾಗುತ್ತಿದೆ, ನಮಗೆ ಬರುವ ಟ್ಯಾಕ್ಸ್ ಹಾಳಾಗಿ ಹೋಗುತ್ತದೆಂದು ಹೇಳಿದೆವು. ಆಗ ಒಂದು ವ್ಯವಸ್ಥೆ ಬಂತು, ಹೊರಗಡೆಯಿಂದ ಇಲ್ಲಿಗೆ ತರಬೇಕು ಎಂದರೆ ಎಂಟ್ರಿ ಟ್ಯಾಕ್ಸ್ ಕಟ್ಟಬೇಕು, ಎಂಟ್ರಿ ಟ್ಯಾಕ್ಸ್ ಕಟ್ಟಿ ತರಬೇಕಾಗಿತ್ತು. Now we have reduced the entry tax. ಸರ್ಕಾರ ಯಾರನ್ನು ಉದ್ಧಾರ ಮಾಡುವುದಕ್ಕಾಗಿ ಇದನ್ನು ಮಾಡುತ್ತದೆ? ಹೊರಗಡೆ ವೆಹಿಕಲ್‌ನ್ನು ಪರ್ಚೇಸ್ ಮಾಡಿ ಟ್ಯಾಕ್ಸ್ ಕಟ್ಟಬೇಕೆಂದು ಇದ್ದಿದ್ದ ಎಂಟ್ರಿ ಟ್ಯಾಕ್ಸ್‌ನ್ನು ತೆಗಿಯಿರಿ ಎಂದು ನಿಮಗೆ ಅಡ್ವೈಸ್ ಮಾಡಿದ ಅಧಿಕಾರಿ ಯಾರು? ಅವನು ಈ ರಾಜ್ಯದ ಹಿತಾಸಕ್ತಿಯನ್ನು ಕಾಯುವ ಕೆಲಸ ಮಾಡುತ್ತಾನಾ? Does he know we are losing funds? ನಾವು ಕುಳಿತುಕೊಂಡು ಮಾತನಾಡಿಬಿಟ್ಟರೆ? ನಮ್ಮ ಉತ್ಪಾದನೆ ಇವತ್ತು ನಾನು ತಮಗೆ ಮಾನ್ಯ ಸಿದ್ದರಾಮಯ್ಯನವರಿಗೆ ಬೇಡಿಕೊಂಡೆ, ಸಾರ್ agricultural produce which are exported outside

Karnataka,-- ಕರ್ನಾಟಕದರಿಂದ ಆಚೆಗೆ ಹೋಗುವ ಯಾವುದೇ ಕೃಷಿ ಉತ್ಪನ್ನದ ಮೇಲೆ ಟ್ಯಾಕ್ಸ್ ಹಾಕಬೇಡಿ. ಅದು ಸಿಎಸ್‌ಟಿ ಇರಲಿ, ಮತ್ತೊಂದು ಇರಲಿ ಹಾಕಬೇಡಿ, ಏನು ಮಾಡಿದಿರಿ ಸ್ವಾಮಿ? ಇವತ್ತು ಕೊಬ್ಬರಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಸಾರ್ ತಮಗೆ ಗೊತ್ತು ತಾವೂ ಕೂಡ ಸ್ವಲ್ಪ ಮಟ್ಟಿಗೆ ಕೊಬ್ಬರಿ ಭಾಗದವರೇ, ಹತ್ತನೇಯ ಒಂದು ಭಾಗದಷ್ಟು ಇವತ್ತು ಬೆಳೆಯಿಲ್ಲ. ನುಸಿ ಪೀಡೆ ಬಂದು, ಬರಗಾಲ ಬಂದು, ಕೊಬ್ಬರಿ ಬೆಳೆ ಈ ವರ್ಷ ನೋಡಿದವರೇ ಇಲ್ಲ ಎನ್ನುವಂಥ ಸ್ಥಿತಿ ಇದೆ. ಮುಂದಿನ ವರ್ಷಕ್ಕೆ ಕೊಬ್ಬರಿ ತೆಗೆದುಕೊಂಡು ಯಾರಾದರೂ ಮಾರ್ಕೆಟ್ ಯಾರ್ಡ್‌ಗೆ ಹೋಗುತ್ತಾರೆ ಎನ್ನುವ ಸ್ಥಿತಿಯಲ್ಲಿ ಇದ್ದರೆ 4 ಪರ್ಸೆಂಟ್ ಸಿಎಸ್‌ಟಿ ಇದೆ. ಯಾರಾದರೂ ಹೊರಗಡೆ ಬಂದು ಅವನು ಪರ್ಚೇಸ್ ಮಾಡಬೇಕು ಎಂದರೆ, he prefers Kerala and Tamil Nadu. ಅವನು ಅಲ್ಲಿ ಸಿಎಸ್‌ಟಿ ಕಟ್ಟಬೇಕಾಗಿಲ್ಲ. ನಮ್ಮ ಗತಿ ಏನು? ನಮ್ಮ ಪ್ರೊಡ್ಯೂಸ್ ಇಲ್ಲಿ ನಿಂತು ಹೋಗುತ್ತದೆ, ಬೇಡಿಕೆ ಕಡಿಮೆಯಾಗುತ್ತದೆ. ನಾವು ಒಂದು ಹತ್ತು ಸಲ ಹೇಳಿದ್ದೇವೆ, ಪ್ಲೀಸ್, ನೀವು ರೈತರ ಬಗ್ಗೆ ಮಾತನಾಡುತ್ತೀರಿ, ರೈತರ ಯಾವುದೇ ಉತ್ಪನ್ನ ಅದು, ಕೊಬ್ಬರಿ, ತೆಂಗಿನಕಾಯಿ, ದ್ರಾಕ್ಷಿ, ಕಾಫಿ ಇರಲಿ ಆಚೆಗೆ ಹೋಗುವುದಕ್ಕೆ ಅದಕ್ಕೊಂದು ಮೂಮೆಂಟ್‌ಮ್ ಕೊಡಿ, ಅದು ಆಚೆ ಹೋಗಲಿ, ಸೇಲ್ ಆಗಲಿ, ಷುಗರ್ ಕೇನ್ ಇರಲಿ, ನೀವು ಟ್ಯಾಕ್ಸ್ ಹಾಕಿಕೊಂಡು ಇಲ್ಲಿ ಕುಳಿತುಕೊಂಡು ನಿರ್ಬಂಧ ಮಾಡಿದರೆ, ರೈತರಿಗೆ ಹೇಗೆ ದುಡ್ಡು ಬರುತ್ತದೆ? ಐ ಡಿಮ್ಯಾಂಡ್ ಮಾನ್ಯ ಪ್ರಕಾಶ್‌ರವರ ಮೂಲಕ ಮಾನ್ಯ ಸಿದ್ದರಾಮಯ್ಯನವರನ್ನು ಕೇಳುತ್ತೇನೆ, ತಮಗೆ ಏನಾದರೂ ತೆಂಗಿನ ಬಗ್ಗೆ, ಕಾಫಿ ಬಗ್ಗೆ, ದ್ರಾಕ್ಷಿ ಬಗ್ಗೆ, ಅಡಿಕೆ ಬಗ್ಗೆ, ತೋಟಗಾರಿಕಾ ಕ್ಷೇತ್ರ ಅಥವಾ ಇಲಾಖೆಯ ಬಗ್ಗೆ ಅಲ್ಪಸ್ವಲ್ಪವಾದರೂ ಇನ್ನೂ ಪ್ರೀತಿ, ಅಭಿಮಾನ ಇದ್ದರೆ, ದಯಮಾಡಿ ಅಲ್ಲಿ ಹಾಕಿರುವ ಟ್ಯಾಕ್ಸ್‌ನ್ನು ತಾವು ತೆಗಿಯಬೇಕು. ಪರ್ಟಿಕ್ಯೂಲರ್ ಆಗಿ ತಾವೇನು ಸಿಎಸ್‌ಟಿಯನ್ನು ಏನೂ ಇಂಪೋಸ್ ಮಾಡಿದಿರಿ, ಅದನ್ನು ತೆಗಿಯಬೇಕು. ನೀವು ಸಿ-ಫಾರಂ ಅನ್ನು ತೆಗಿಯುತ್ತಿರೋ ಬಿಡುತ್ತಿರೋ ಅದನ್ನು ನಾವು ಕೇಳುವುದಕ್ಕೆ ಬರುವುದಿಲ್ಲ. ಬಿಕಾಸ್ ನಮ್ಮ ಕೈಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟು ನಾವು ಕುಳಿತ್ತಿದ್ದೇವೆ. ಸಿ-ಫಾರಂ ಇದ್ದಾಕ್ಷಣಕ್ಕೆ 4 ಪರ್ಸೆಂಟ್ ಸಿಎಸ್‌ಟಿ ಹಾಕಬೇಕೆಂದು ಎಲ್ಲಿ ಹೇಳಿಲ್ಲ. ನಿಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೆ ಅದರಿಂದ ತಾವು ಆಚೆಗೆ ಬರಬೇಕು.. ಹಾಗೆಯೇ ಮಾನ್ಯ ಅಧ್ಯಕ್ಷರೆ, ನನಗೂ ಏಕೋ ಸ್ವಲ್ಪ ಬೇಜಾರಾಗುತ್ತದೆ, ನೀವು ಕೇಳುವ ಮೂಡ್‌ನಲ್ಲಿ ಇಲ್ಲವೆಂದರೆ ನಾನು ಯಾರಿಗೆ ಹೇಳಲಿ? ಇಲ್ಲ ಇಲ್ಲ ಪ್ಲೀಸ್ ಐಯಾಮ್ ಸಾರಿ..

ಶ್ರೀ ಎಂ.ಪಿ. ಪ್ರಕಾಶ್ : ನೋಡಿ ಜೆಡ್‌ಪಿ, ಟಿಪಿ ಇವುಗಳ ಹಣವನ್ನು ಅವರಿಂದ ವಾಪಸ್ ತೆಗೆದುಕೊಂಡಿದ್ದಾರೆ, ಆ ಹಣ ತೆಗೆದುಕೊಳ್ಳುವುದಕ್ಕೆ ಕಾರಣ ಏನು? ಪ್ರೈಯಾರಿಟಿ ಸೆಕ್ಟಾರ್ ಯಾವುದು? ಪ್ರತಿಯೊಂದೂ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ನಮ್ಮ ಮಾತು ನಮ್ಮ ಅನುಭವದಿಂದ ಈ ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ಮಾತನಾಡುತ್ತೇವೆ, ಆಡುವುದು ಆಡಿಕೊಂಡು ಹೋಗಲಿ ಏನಾಗಬೇಕಾಗಿದೆ ಎಂದರೆ ನಾವು ತಾನೇ ಏಕೆ ಈ ಅಸೆಂಬ್ಲಿ ಟೈಂ ವೇಸ್ಟ್ ಮಾಡೋಣ?

ಶ್ರೀ ಎಂ.ಪಿ. ಪ್ರಕಾಶ್ : ಹಾಗೇನೂ ಇಲ್ಲ ನಾನೂ ಕೂಡ ಸೀರಿಯೆಸ್ಸಾಗಿ ಕೇಳುತ್ತಿದ್ದೇನೆ, ಎಲ್ಲಾ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅವರಿಗೆ ಸ್ಪಷ್ಟವಾಗಿ ಕೇಳುತ್ತಿದ್ದೆ, ಅದರಲ್ಲೂ ಮಾನ್ಯ ಪ್ರಕಾಶ್ ಸಾಹೇಬ್ರಿಗೆ, ಕೊಬ್ಬರಿ ಮೇಲೆ ನೀವು 4 ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಿರುವುದು ಏಕೆ?....

ಶ್ರೀ ಎಂ.ಪಿ. ಪ್ರಕಾಶ್ : 4 ಪರ್ಸೆಂಟ್ ಟ್ಯಾಕ್ಸ್ ಕೊಬ್ಬರಿ ಮೇಲೆ ಹಾಕಿದ್ದು ಸರಿಯಲ್ಲ. ಎಲ್ಲವನ್ನೂ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎರಡನೆಯದಾಗಿ ಹೇಳುತ್ತಿದ್ದೇನೆ, ಕಾಫಿ, ಸ್ವಾಗೆಕಡ್ಡಿ, ಇಜ್ಜಲು, ಇವುಕೆಲ್ಲಾ ಟ್ಯಾಕ್ಸ್‌ನ್ನು ಏನು ಇಂಪೋಸ್ ಮಾಡುತ್ತಿದ್ದೀರಿ, ಅದನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು. ಅಗ್ರಿಕಲ್ಚರ್ ಅಂಡ್ ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರಿಗಳ ತಲೆಭಾರವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದರೆ ಮಾತ್ರ ಈ ರಾಜ್ಯದಲ್ಲಿ ನಾವು ಏನಾದರೂ ತಲೆ ಎತ್ತಿಕೊಂಡು ತಿರುಗಾಡಬಹುದು. ಆದರೆ, ಇವತ್ತಿನ ದಿವಸ ಆ ಸ್ಥಿತಿಯಲ್ಲಿಲ್ಲ. ಇವತ್ತಿನ ದಿವಸ ತಾವು ಏನು ಮಾಡುತ್ತಿದ್ದೀರೆಂದರೆ, ಯಾರೊಬ್ಬ ಅಧಿಕಾರಿ ಬರೆದುಕೊಟ್ಟಂಥ ಬಜೆಟ್‌ನ್ನು ಇಲ್ಲಿಡುತ್ತಿದ್ದೀರಿ. ನಿಮಗೆ ಇದೆಲ್ಲಾ ತಲೆಯೊಳಕ್ಕೆ ಹೋಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮಾಧುಸ್ವಾಮಿಯವರೆ, ಮಾನ್ಯ ಪ್ರಕಾಶ್‌ರವರು ಕೈಯಲ್ಲಿ ಬರೆದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆವಿಲ್ಲ. ಏಕೆಂದರೆ, ಅವರ ತಲೆಯೇ ಕಂಪ್ಯೂಟರ್ ಇದ್ದಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಪಾಟೀಲ್‌ರವರೆ, ಇದು ನಿಮಗಿಂತ ನಮಗೆ ಚೆಂದ. ಆದರೆ, ಅವರು ಕೇಳಲಿಲ್ಲ ಎಂಬುದರಲ್ಲಿ ಅರ್ಥವಿದೆ. ಇದು ಅವರಿಗೆ ಮತ್ತು ನನಗೆ ಗೊತ್ತು. ಈ ವಿಷಯವನ್ನು ಅಲ್ಲಿಗೆ ಬಿಟ್ಟುಬಿಡುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ನನ್ನನ್ನು ಕೆಣಕುವುದಕ್ಕೆ ಹೋಗಬೇಡಿ. ಇನ್ನು ಬೆಂಗಳೂರು ಸಿಟಿಯಲ್ಲಿ ಆ ಪಾರ್ಕ್ ಮಾಡುತ್ತೇವೆ. ಈ ಪಾರ್ಕ್ ಮಾಡುತ್ತೇವೆ ಮತ್ತೆ ಇಲ್ಲಿಗೆ ಇನ್‌ಫೋಸಿಸ್ ತಂದಿದ್ದೇವೆಂದು ಹಾಗೂ ಇಲ್ಲಿ ಮಾನ್ಯ ಪ್ರೇಮ್‌ಜಿರವರು ಮತ್ತು ಅವರಿವರೆಲ್ಲರೂ ಇಲ್ಲಿದ್ದಾರೆಂದು ಇವರು ಹೊಗಳುವುದು ಮತ್ತು ಕೊಚ್ಚಿಕೊಳ್ಳುತ್ತಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಸರ್ಕಾರ ಏನಾದರೂ ಬೆಂಗಳೂರು ಸಿಟಿಯಲ್ಲಿ ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್ ಮಾಡದೆ ಇದ್ದರೆ ಬೆಂಗಳೂರು ನಗರದಲ್ಲಿರತಕ್ಕಂಥ ಐ.ಟಿ. ಇಂಡಸ್ಟ್ರಿಗಳೆಲ್ಲವನ್ನೂ ಬೇರೆ ಕಡೆಗೆ ಶಿಫ್ಟ್ ಮಾಡುತ್ತೇವೆ. ಅಂದರೆ ಬೆಂಗಳೂರಿನಿಂದ ನಿರ್ಗಮಿಸುತ್ತೇವೆಂದು ಹೇಳಿಕೆ ಕೊಡುತ್ತಿದ್ದಾರೆ. ಮತ್ತೆ ನಾವು ಈ ಊರಿನಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಕಾರಣ ಏನೆಂದರೆ ನಿಮ್ಮಲ್ಲಿ ಪವರ್ ಪ್ರಾಬ್ಲಮ್ ಮತ್ತು ನಿಮ್ಮ ರಸ್ತೆಗಳು ಈ ರೀತಿ ಇವೆ ಮತ್ತೆ ನಿಮ್ಮ ಏರ್‌ಪೋರ್ಟ್‌ಗೆ ಹೋಗುವುದಕ್ಕೆ ಇಷ್ಟೊಂದು ಸಮಯ ಬೇಕಾಗುತ್ತದೆ. ಮತ್ತೆ ಇಂಥಿಂಥ ಸೌಲಭ್ಯಗಳನ್ನು ನಮಗೆ ಒದಗಿಸಿಕೊಡುತ್ತೇವೆಂದು ನೀವು ನಮಗೆ ಭರವಸೆಯನ್ನು ಕೊಟ್ಟಿದ್ದೀರೆಂದು ಹೇಳಿಕೆ ಕೊಟ್ಟಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಅರ್ಥ ಸಚಿವರ ತೀರ್ಮಾನ ಏನು ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ. ಇದರ ಬಗ್ಗೆ ನನಗೆ ಗೊತ್ತಾಗಬೇಕು. ಪ್ರೇಮ್‌ಜಿರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಬೆಂಗಳೂರು ಸಿಟಿಯಿಂದ ನಾವು ಆಚೆಗೆ ಹೋಗತಕ್ಕಂಥ ಕಾಲ ಬಂದಿದೆ. ಮತ್ತೆ ಏನು ಇನ್‌ಫ್ರಾಸ್ಟ್ರಕ್ಚರ್‌ನ್ನು ಕ್ರಿಯೇಟ್ ಮಾಡುತ್ತೇವೆಂದು ಸರ್ಕಾರ ಹೇಳಲಾಗಿರತಕ್ಕಂಥದು ಇದುವರೆಗೂ ಆಗಿಲ್ಲ. "We are forced to quit Bangalore City" ಎಂದು ಈ ಮಾತನ್ನು ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ನೀವು ಮತ್ತು ಸನ್ಮಾನ್ಯ ಪರಮೇಶ್ವರ್‌ರವರು ಮಾನ್ಯ ರಾಜ್ಯಪಾಲರ ಭಾಷಣವನ್ನು ಇಲ್ಲಿ ಮಂಡಿಸುವ ದಿವಸ ಐ.ಟಿ. ಉದ್ಯಮಕ್ಕೆ ಬಹಳ ಸ್ಟೆಸ್ ಕೊಟ್ಟಿರಿ. ಕಳೆದ ನಾಲ್ಕೂವರೆ ವರ್ಷ ಆಡಳಿತ ಮಾಡಿದಂಥ ಸರ್ಕಾರವನ್ನು ಬೆಂಬಲಿಸಿರತಕ್ಕಂಥದ್ದು ಮತ್ತು ಚಿತ್ರಿಸಿದ್ದು ಹಾಗೂ ಸಿನಿಮಾ ತೋರಿಸುವ ಹಾಗೆ ತೋರಿಸಿದ್ದು ಮತ್ತು ಗ್ಲೋಬಲೈಜೇಷನ್ ಮತ್ತೆ ಇಲ್ಲಿ ನಡೆದಂಥ

ಇನ್‌ವೆಸ್ಟರ್ ಮೀಟ್, ಗ್ಲೋಬಲ್ ಇನ್‌ವೆಸ್ಟರ್ ಮೀಟ್, ಟೆಕ್ನೋಕ್ರಾಟ್ಸ್ ಮೀಟ್, ಸೈಂಟಿಸ್ಟ್ ಮೀಟ್ ಎಂದು ಇದಕ್ಕೆ ಜಪಾನ್‌ರವರು ಮತ್ತು ರಷ್ಯಾದವರು ಹಾಗೂ ಬೇರೆಯವರೆಲ್ಲರೂ ಬೆಂಗಳೂರಿಗೆ ಬಂದು ಬಂದು ಬೆಂಗಳೂರು ಏನಾಗುತ್ತದೋ ಎನ್ನುವ ರೀತಿಯಲ್ಲಿ ತಾವು ಮಾಡಿದ್ದೀರಿ. ಬೆಂಗಳೂರಿಗೆ 25 ಸಾವಿರ ಕೋಟಿ ರೂಪಾಯಿ ಬಂಡವಾಳ ತರುತ್ತೇವೆಂದು ತಾವು ಆ ಸಂದರ್ಭದಲ್ಲಿ ಭಾಷಣ ಮಾಡಿದ್ದೀರಿ. I am impounding 25000 cr. Investment. ಆದರೆ, ಮೊನ್ನೆ ದಿವಸ ತಾವು ಇಲ್ಲಿ ಕುಳಿತುಕೊಂಡು 5 ಸಾವಿರ ಚಿಲ್ಲರೆ ಕೋಟಿ ಬಂಡವಾಳ ತಂದಿದ್ದೇವೆಂದು ಹೇಳಿದ್ದೀರಿ. ಇಷ್ಟೊಂದು ಇನ್‌ವೆಸ್ಟ್‌ಮೆಂಟ್ ತರುವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ ಎನ್ನತಕ್ಕಂಥದನ್ನು ಕೇಳಿ ಎಂದು ಆ ಸಂದರ್ಭದಲ್ಲಿ ಮಾತನಾಡುತ್ತಿದ್ದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೆ ಹೇಳಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆ 5 ಸಾವಿರ ಕೋಟಿ ರೂಪಾಯಿಗಳಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿ ರಿಲಿಯನ್ಸ್‌ವರ ಕೇಬಲ್ ಲೇಯಿಂಗ್ ಸೇರಿದೆ. ಆದ್ದರಿಂದ ಕೇವಲ 3 ಸಾವಿರ ಕೋಟಿ ರೂಪಾಯಿ ಮಾತ್ರ ಇನ್‌ವೆಸ್ಟ್‌ಮೆಂಟ್ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರವನ್ನೂ ಕೂಡ ಇವರು ಕೇವಲ ಭ್ರಮೆಯ ಮೇಲೆ ಬದುಕಿಸಿದ್ದಾರೆ. ಇವರು ಬೇರೆನು ಕೆಲಸವನ್ನು ಮಾಡಿಲ್ಲ. ಅಕಸ್ಮಾತ್ ಇವರು ಮಾಡಿರತಕ್ಕಂಥದ್ದು ಏನೆಂದರೆ ಸಾಲ ಮಾಡಿರತಕ್ಕಂಥದ್ದು. ಎಲ್ಲೆಲ್ಲಿ ಸಾಲ ಸಿಗುತ್ತದೆಯೋ ಅಂಥ ಕಡೆಯಲ್ಲಾ ಸಾಲ ಮಾಡಿದ್ದಾರೆ. ಹಿಂದೆ ಸರ್ಕಾರ ನಡೆಸಿದಂಥ ಮಾಜಿ ಮುಖ್ಯಮಂತ್ರಿಯೊಬ್ಬರು ಬಹಳ ಹೇಳಿಕೆಯನ್ನು ಕೊಟ್ಟರು. ಅದೇನೆಂದರೆ, ನಾವು ಸಾಲ ಮಾಡುವ ಕಡೆ ಕೇಂದ್ರ ಸರ್ಕಾರ ಅಡ್ಡಿ ಮಾಡುತ್ತಿದೆ ಮತ್ತು ನಾವು ಫರ್ದರ್ ಲೋನ್‌ನ್ನು ಡ್ರಾ ಮಾಡುವುದಕ್ಕೆ ಬಿಡುತ್ತಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಿದ್ಧರಾಮಯ್ಯನವರು ಏನು ಹೇಳಿದ್ದಾರೆಂದರೆ, ಫರ್ದರ್ ಲೋನ್‌ನ್ನು ಡ್ರಾ ಮಾಡುವುದಕ್ಕೆ ನಿಮಗೆ ಕೆಪಾಸಿಟಿ ಇಲ್ಲ, ಮತ್ತೆ ಫರ್ದರ್ ಲೋನ್‌ನ್ನು ಡ್ರಾ ಮಾಡುವುದಕ್ಕೆ ಆಗಲಾರದೇ ಇರತಕ್ಕಂಥ ಸ್ಥಿತಿಗೆ ಈ ರಾಜ್ಯ ಸರ್ಕಾರ ಬಂದು ನಿಂತಿದೆ ಎಂದು ತಾವು ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೀರಿ. Why this contradiction? ಸಾಲ ಕೊಡುವುದಕ್ಕೆ ಕೇಂದ್ರ ಸರ್ಕಾರ ನಮಗೆ ಕೋಆಬ್ಲಿಗೇಟ್ ಆಗುತ್ತಿಲ್ಲ ಮತ್ತೆ ನಮಗೆ ಸಹಾಯ ಮಾಡುತ್ತಿಲ್ಲ. ನಮಗೆ ಅವರು ಸಹಾಯ ಮಾಡಿದ್ದರೆ ಕರ್ನಾಟಕ ರಾಜ್ಯವನ್ನು ಸ್ವರ್ಗ ಮಾಡುತ್ತಿದ್ದೆ ಎಂದು ಭಾಷಣ ಮಾಡಿದಂಥ ಸರ್ಕಾರದ ಉಳಿದ ಭಾಗಕ್ಕೆ ತಮ್ಮ ಬಜೆಟ್‌ನಲ್ಲಿ ಒಪ್ಪುತ್ತೀರಿ. ಏನೆಂದರೆ ಸಾಲವನ್ನು ಫರ್ದರ್ ತೆಗೆದುಕೊಳ್ಳುವುದಕ್ಕೆ ಶಕ್ತಿಯಿಲ್ಲವೆಂದು ಹೇಳಿದ್ದೀರಿ. ಮತ್ತೆ ಯಾವುದಾದರೂ ಖರ್ಚು ವೆಚ್ಚ ಮಾಡುವುದಕ್ಕೆ ನಮ್ಮ ಹತ್ತಿರ 25 ಪರ್ಸೆಂಟ್‌ನಷ್ಟು ಮಾತ್ರ ಇದೆ. ಮತ್ತೆ ನಾವು ಮಾಡಿರತಕ್ಕಂಥ ಸಾಲವನ್ನು ತೀರಿಸುವುದಕ್ಕೆ ಮತ್ತು ಇದಕ್ಕೆ ಕಂತುಕಟ್ಟುವುದಕ್ಕೆ ಹಾಗೂ ಸಂಬಳ ಕೊಡುವುದಕ್ಕೋಸ್ಕರ 75 ಪರ್ಸೆಂಟ್ ನಷ್ಟು ನಾವು ಖರ್ಚು ಮಾಡತಕ್ಕಂಥ ಪರಿಸ್ಥಿತಿಗೆ ಬಂದು ನಿಂತಿದ್ದೇವೆಂದು ತಾವೇ ಹೇಳಿದ್ದೀರಿ. ಮತ್ತೆ ಕಂಟ್ರೋಲರ್ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ, 10 ಪರ್ಸೆಂಟ್‌ನಷ್ಟು ಹಣ ರಸೀಟ್ಸ್ ಆಗುತ್ತಿಲ್ಲ. ಎನೊಂದು ಫಿಗರ್ಸ್‌ನ್ನು ತಾವೇನು ಪ್ರೊಜೆಕ್ಟ್ ಮಾಡಿರುತ್ತೀರಿ ಅದರಲ್ಲಿ ಸುಮಾರು 10ರಷ್ಟು ವಸೂಲಾತಿ, ಸ್ವೀಕೃತಿಯಾಗುವುದಿಲ್ಲವೆಂದು ವರದಿಯಲ್ಲಿ ಹೇಳಿದ್ದಾರೆ. ಹಾಗಾದರೆ, ಈ ರಾಜ್ಯದ ವಾಸ್ತವಿಕವಾದ ಬಜೆಟ್ ಏನು? ಮತ್ತೆ ವಾಸ್ತವಿಕವಾದ ಬಜೆಟ್‌ನ್ನು ಯಾರಿಗೋಸ್ಕರ ನೀವು ಇಟ್ಟಿದ್ದೀರಾ? ಹಾಗಾದರೆ, ವಾಸ್ತವವಾದ ಬಜೆಟ್‌ನ ಚಿತ್ರಣವನ್ನು ಯಾವತ್ತು ಕೊಡುತ್ತೀರಾ? ನಾನು ಈ ಸದನದಲ್ಲಿ ನಿಂತುಕೊಂಡು ಸನ್ಮಾನ್ಯ

ಮುಖ್ಯಮಂತ್ರಿಯವರಲ್ಲಿ ಡಿಮ್ಯಾಂಡ್ ಮಾಡುವುದೇನೆಂದರೆ, ನಿಮ್ಮ debts ಏನಿದೆ, debts including bills payable as on 31st March 2004 -- ಈ ಸಭೆಯ ಮುಂದೆ ಹೇಳುತ್ತೀರಾ? ಮತ್ತೆ ಎಷ್ಟು ಕೋಟಿ ರೂಪಾಯಿ ಇದೆ ಎನ್ನತಕ್ಕಂಥದನ್ನು ಹೇಳುತ್ತೀರಾ? ನನ್ನ ಎರಡನೇ ಡಿಮ್ಯಾಂಡ್ ಏನೆಂದರೆ, 54–30 ಹೆಡ್‌ನ್ನು ಸ್ಟಾಪ್ ಮಾಡಿದ್ದಾರೆ. ಒಂದು ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಮತ್ತು ಗುಂಡಿ ಮುಚ್ಚುವುದಕ್ಕೆ ಮತ್ತೆ ಎಲ್ಲಿಯಾದರು ಕೆರೆಕಟ್ಟೆ ಹೊಡೆದು ಹೋದರೆ ನಾವು ಹಳ್ಳಿಯಲ್ಲಿ ಕುಳಿತುಕೊಂಡು ಇಂಜಿನಿಯರ್ ಕರೆದು ಅಲ್ಲಿಗೆ ಹೋಗಿ ಮಣ್ಣು ಹಾಕಿಕೊಂಡು ಬನ್ನಿ ಎಂದು ಹೇಳುತ್ತಿದ್ದೆವು. ಆದರೆ, ಈ ಕೆಲಸ ಮಾಡುವುದಕ್ಕೆ ನಾನ್ ಪ್ಲಾನ್‌ನಲ್ಲಿದ್ದಂಥ 54–30 ಹೆಡ್‌ನ್ನು ಇವತ್ತಿನ ದಿವಸ ಸ್ಟಾಪ್ ಮಾಡಿದ್ದಾರೆ. ಕಳೆದ ವರ್ಷ ಪ್ರತಿ ತಾಲ್ಲೂಕಿನಲ್ಲಿ ಸುಮಾರು 35 ರಿಂದ 50 ಲಕ್ಷ ರೂಪಾಯಿ ಕೆಲಸಗಳು 54–30 ಹೆಡ್‌ನಲ್ಲಿ ಆಗಿವೆ. ಆದರೆ, ಬಿಲ್‌ಗಳು ಪೆಂಡಿಂಗ್ ಇವೆ. ಅದನ್ನು ಯಾವ ದುಡ್ಡಿನಲ್ಲಿ ಕೊಡುತ್ತೀರಿ ಎನ್ನತಕ್ಕಂಥದನ್ನು ಈ ಬಜೆಟ್‌ನಲ್ಲಿ ಇವರು ಹೇಳಬೇಕಾಗಿದೆ. ಗುತ್ತಿಗೆದಾರರ ಕಡೆಯಿಂದ ಕೆಲಸ ಮಾಡಿಸಿ ಇಲಾಖೆಯವರು ಮಾಡಿದ್ದಾರೆಂದು ಬರೆದುಕೊಂಡಿದ್ದೀರಿ. ಇವತ್ತಿನ ದಿವಸ ಪೇಮೆಂಟ್ ಆಗುವುದಕ್ಕೆ ಸಂಬಂಧಪಟ್ಟಂಥ ಹೆಡ್‌ನ್ನೇ ತೆಗೆದು ಹಾಕದ್ದೀರಿ. ಆದರೆ ಒಂದು ಮಾತನ್ನು ತಾವು ಹೇಳಿದ್ದೀರಿ. ಅದೇನೆಂದರೆ, ಮತ್ತೆ ವಾಪಸ್ಸು ಹೋಗಿ ನಾನ್ ಪ್ಲಾನ್ ಹೆಡ್‌ನ್ನು ಅಪರೇಟ್ ಮಾಡುತ್ತೀವೆಂದು ಹೇಳಿದ್ದೀರಿ. ಆದ್ದರಿಂದ ಯಾವ ಹೆಡ್‌ನ್ನು ಅಪರೇಟ್ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಈ ಸಭೆಗೆ ಹೇಳಬೇಕು. ಏಕೆಂದರೆ ಸುಮಾರು ಏಳೆಂಟು ಹೆಡ್‌ಗಳನ್ನು ವೈಂಡ್ ಅಪ್ ಮಾಡಿದ್ದೀರಿ. ಅಲ್ಲಿ ಆಗಬೇಕಾಗಿರತಕ್ಕಂಥ ಪೇಮೆಂಟ್‌ನ್ನು ಸ್ಟಾಪ್ ಮಾಡಿದ್ದೀರಿ. ಶಾಸಕರಿಗೆ ಡಿಸ್ಕ್ರಿಷನರಿ ಫಂಡ್ ಬೇಕೆಂದು ಈ ಶಾಸನಸಭೆಯಲ್ಲಿರತಕ್ಕಂಥ ಎಲ್ಲರಿಗೂ ಆಸೆ ಇತ್ತು. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಶಾಸಕರಿಗೆ ಡಿಸ್ಕ್ರಿಷನರಿ ಫಂಡ್ ಕೊಡುತ್ತೇವೆಂದು ಮಾಡಿದಾಗಲೇ ಈ ಹೆಡ್‌ಗಳನ್ನು ಸ್ಟಾಪ್ ಮಾಡಿದ್ದೀರಿ. ಒಬ್ಬ ಶಾಸಕರಿಗೆ 40 ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಹೆಡ್‌ನಲ್ಲಿ ಸುಮಾರು 40 ರಿಂದ 50 ಲಕ್ಷ ರೂಪಾಯಿನಷ್ಟು ಮೈಂಟೇನೆನ್ಸ್ ಗ್ರ್ಯಾಂಟ್ ಬರುತ್ತಿದುದ್ದನ್ನು ನಿಲ್ಲಿಸಿ ನಮಗೆ ಯಾವ ಪುರುಷಾರ್ಥಕ್ಕಾಗಿ ಬೇಕು ಆ ಫಂಡ್ ನಮಗೆ? ಯಾವ ಪುರುಷಾರ್ಥಕ್ಕಾಗಿ ಎಂ.ಎಲ್.ಎ. ಫಂಡ್ ಕೊಡುತ್ತಿದ್ದೀರಿ ಎಂಬುದು ನಮಗೆ ಅರ್ಥ ಆಗುತ್ತಿಲ್ಲ. ಘನತೆವೆತ್ತ ಕೃಷಿ ಮಂತ್ರಿಗಳಾಗಿರತಕ್ಕಂಥ ಮಾನ್ಯ ಶ್ರೀನಿವಾಸಗೌಡರು ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ದುಡ್ಡು ಕೊಟ್ಟಿಲ್ಲವೆಂದು ಕ್ಯಾಬಿನೆಟ್‌ನಲ್ಲಿ ಪ್ರೊಟೆಸ್ಟ್ ಮಾಡಬೇಕಾಗಿತ್ತು. ಅಂದರೆ, ನಾನೊಬ್ಬ ಬಯಲುಸೀಮೆ ಭಾಗದ ಶಾಸಕ ಮತ್ತು ನಾನು ಇವತ್ತು ಕೃಷಿ ಮಂತ್ರಿಯಾಗಿದ್ದೇನೆ. ಆದ್ದರಿಂದ ನನಗೇಕೆ ಈ ರೀತಿ ಅನ್ಯಾಯ ಮಾಡುತ್ತಿದ್ದೀರಿ. ಈ ರೀತಿಯಾದರೆ ನಾನೇಕೆ ಕೃಷಿ ಮಂತ್ರಿ ಆಗಬೇಕೆಂದು ಅವರು ಕೇಳಲಿಲ್ಲ.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಸದಸ್ಯರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರ ಮುಂದೆ ನಾನೇನೂ ಪ್ರೊಟೆಸ್ಟ್ ಮಾಡಬೇಕಾಗಿಲ್ಲ. ನಾನು ಮಾಡುವ ಜಾಗದಲ್ಲಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ವಿಷಯ ಬಜೆಟ್‌ನಲ್ಲಿ ರಿಫ್ಲೆಕ್ಟ್ ಆಗದೆ ಇರುವುದರಿಂದ ತಾವು ಪ್ರೊಟೆಸ್ಟ್ ಮಾಡಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಯಾವ್ಯಾವುದಕ್ಕೋ ಪ್ರೊಟೆಸ್ಟ್ ಮಾಡುತ್ತಿದ್ದೀರಿ. ಆದರೆ, ನಿಮ್ಮ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ದುಡ್ಡು ಬೇಕೆಂದು ಪ್ರೊಟೆಸ್ಟ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಪರ್ಸನಲ್ ಆಗಿ ಏನಾದರೂ ಅಲ್ಲಿ ಮಾತನಾಡಿಕೊಂಡಿರಬಹುದು.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ : ವಿರೋಧ ಪಕ್ಷದ ನಾಯಕರುಗಳನ್ನು ಕೇಳಿಕೊಂಡು ನಾನೇನೂ ಮಾಡಬೇಕಾಗಿಲ್ಲ. ಅದು ನನ್ನ ಜವಾಬ್ದಾರಿ. ಆದ್ದರಿಂದ ಅದನ್ನು ಮಾಡಿದ್ದೇನೆ ಎಂಬುದನ್ನು ಹೇಳುತ್ತಿದ್ದೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಪರ್ಸನಲ್ ಆಗಿ ಮಾತನಾಡಿಕೊಂಡಿರತಕ್ಕಂಥದ್ದು ನಮಗೆ ಬೇಕಾಗಿಲ್ಲ. ಪಬ್ಲಿಕ್ ಡಾಕ್ಯುಮೆಂಟ್‌ನ್ನು ಇಲ್ಲಿಟ್ಟಿದ್ದೀರಿ. ಆದರೆ ಇದರಲ್ಲಿ ರಿಪ್ಲೆಕ್ಟ್ ಆಗಿಲ್ಲ ಎನ್ನತಕ್ಕಂಥದ್ದು ನಮ್ಮ ವಾದ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರೆ, ಮೊದಲು ನಾವು ಎಂ.ಎಲ್.ಎ. ಆದಂಥ ಸಂದರ್ಭದಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಇಷ್ಟು ಹಣವನ್ನು ಇಟ್ಟಿದ್ದೇವೆ ಎನ್ನತಕ್ಕಂಥದೆಲ್ಲಾ ಬಜೆಟ್ ಪುಸ್ತಕದಲ್ಲಿ ಬರುತ್ತಿತ್ತು. ಮತ್ತೆ ಇದು ಅಗ್ರಿಕಲ್ಚರ್ ಮಿನಿಸ್ಟರ್ ವ್ಯಾಪ್ತಿಗೆ ಕೂಡ ಬರುತ್ತಿತ್ತು. ಅದಕ್ಕಾಗಿಯೇ ನಿಮ್ಮ ಹೆಸರನ್ನು ನಾನು ಪ್ರಸ್ತಾಪ ಮಾಡಿದೆ ವಿನಃ ಬೇರೆ ಕಾರಣದಿಂದಲ್ಲ. ಸುಮಾರು 71 ರಿಂದ 79 ಜನ ಶಾಸಕರು ಬಯಲುಸೀಮೆ ಪ್ರದೇಶದವರಿದ್ದೀರಿ. ಎರಡನೆಯದಾಗಿ, ಇದು ಬಹಳ ಪ್ರಾಮುಖ್ಯವಾದಂಥದ್ದು. ಏಕೆ ಎಂಬುದರ ಬಗ್ಗೆ ಒಂದು ಮಾತನ್ನು ಇಲ್ಲಿ ಕೋಟ್ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಮಾನ್ಯ ಆಶೋಕ್ ಗುಲಾಟಿಯವರು ಮಾತನಾಡುವಂಥ ಸಂದರ್ಭದಲ್ಲಿ ಏನು ಹೇಳುತ್ತಾರೆಂದರೆ:

"The Stress on dry water bodies with its bottom of attitude is both efficient and more realistic. Personally I would prefer them to mega irrigation projects, but the allocation to these projects at Rs. 100 crore is very little compared to Rs. 2800 crores for mega projects".

ಕೇಂದ್ರ ಸರ್ಕಾರದ ಬಜೆಟ್ ಮೇಲೆ ಅವರು ಮಾತನಾಡುವಂಥ ಸಂದರ್ಭದಲ್ಲಿ ಇದನ್ನು ಹೇಳಿದ್ದಾರೆ. ಮಾನ್ಯ ಶ್ರೀನಿವಾಸಗೌಡರೆ, ನಾನೂ ಕೂಡ ಇದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. ನಾವೇನು ಇರಿಗೇಷನ್ ಪ್ರಾಜೆಕ್ಟ್‌ನ್ನು ಮಾಡುವುದಕ್ಕೋಸ್ಕರ ಹಣವನ್ನು ಇಟ್ಟಿರುವ ಬಗ್ಗೆ ಮತ್ತು ಇರಿಗೇಷನ್ ಪ್ರಾಜೆಕ್ಟ್‌ನಿಂದ ಏನು ಪೊಟೆನ್‌ಯಿಶಲ್ ಕ್ರಿಯೇಟ್ ಆಗುತ್ತದೆಂದು ತಾವುಗಳು ಭಾಷಣ ಮಾಡುತ್ತೀರಿ. ಆದರೆ ಆಕ್ಚುವಲ್ ಆಗಿ ಇರಿಗೇಷನ್ ಆಗದೆ ಹೋದರೂ ಕೂಡ ಅಧಿಕಾರಿಗಳು ಏನು ರಿಪೋರ್ಟ್ ಕೊಡುತ್ತಾರೆಂದರೆ, We have created so much potential ಎಂದು. ಒಂದು ಡ್ಯಾಂ ಆಗುತ್ತಿದ್ದ ಹಾಗೆ ಪೊಟೆನ್‌ಶಿಯಿಲ್ ಕ್ರಿಯೇಟ್ ಆಗುವುದಿಲ್ಲ. 1987ನೇ ಇಸವಿಯಲ್ಲಿ ಆರಂಭವಾದ ಹೇಮಾವತಿ ಪ್ರಾಜೆಕ್ಟ್‌ನಿಂದ ಇವತ್ತಿನದಿನದವರೆಗೂ ಕೂಡ ಒಂದು ಎಕರೆ ಪ್ರದೇಶಕ್ಕೂ ನೀರನ್ನು ಕೊಟ್ಟಿಲ್ಲ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ಮತ್ತೆ ಅವರು ಬೇರೆ ಕಡೆಗೆ ಹೋಗಬೇಕಾಗಿರುವುದರಿಂದ ಆಲಮಟ್ಟಿ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರ ಸ್ಟೇಟ್‌ಮೆಂಟ್ ಆದನಂತರ ತಾವು ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ತಮ್ಮ ಹೇಳಿಕೆಯನ್ನು ಮಾಡಬಹುದು.

8. ಸನ್ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಆಂಧ್ರಪ್ರದೇಶಕ್ಕೆ ಕರ್ನಾಟಕದ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡುವ ಬಗ್ಗೆ.

ಆಂಧ್ರ ಪ್ರದೇಶದ ನೀರಾವರಿ ಸಚಿವರಾದ ಶ್ರೀ ಪಿ. ಲಕ್ಷ್ಮಯ್ಯರವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಆಂಧ್ರಪ್ರದೇಶದ ಕರಾವಳಿ ಪ್ರದೇಶದ ಕೆಲವು ಭಾಗಗಳಲ್ಲಿ ತೀವ್ರವಾದ ನೀರಿನ ಅಭಾವ ಪರಿಹರಿಸಲು ಆಲಮಟ್ಟಿ ಜಲಾಶಯದಿಂದ 20 ಟಿಎಂಸಿ ನೀರನ್ನು ಬಿಡುಗಡೆ ಮಾಡುವಂತೆ ಬೆಂಗಳೂರಿನಲ್ಲಿ ದಿನಾಂಕ 8–7–2004 ರಂದು ಖುದ್ದಾಗಿ ಮನವಿಯನ್ನು ನೀಡಿರುತ್ತಾರೆ. ವಿಷಯವನ್ನು ಪರಿಶೀಲಿಸುತ್ತೇನೆಂದು ತಿಳಿಸಿರುತ್ತೇನೆ.

ಆಂಧ್ರಪ್ರದೇಶದ ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷ ನಾಯಕರ ನಿಯೋಗದೊಂದಿಗೆ ಮಾನ್ಯ ಪ್ರಧಾನಮಂತ್ರಿಗಳನ್ನು ದಿನಾಂಕ 22–7–2004ರಂದು ಭೇಟಿ ಮಾಡಿ ಆಲಮಟ್ಟಿ ಜಲಾಶಯದಿಂದ ಕನಿಷ್ಠ 50 ಟಿ.ಎಂ.ಸಿ. ನೀರನ್ನು ಆಂಧ್ರಪ್ರದೇಶಕ್ಕೆ ಬಿಡುಗಡೆಗೊಳಿಸುವಂತೆ ಕರ್ನಾಟಕಕ್ಕೆ ಸೂಚಿಸಬೇಕೆಂದು ಕೋರಿರುತ್ತಾರೆ. ವಿವರಣೆ ನೀಡುತ್ತಾ, ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಗಳಲ್ಲಿ 137 ಟಿ.ಎಂ.ಸಿ. ನೀರಿನ ಸಂಗ್ರಹವಿದ್ದು ಅದರಿಂದ 50 ಟಿ.ಎಂ.ಸಿ. ನೀರನ್ನು ಆಂಧ್ರಪ್ರದೇಶಕ್ಕೆ ಬಿಡುಗಡೆಗೊಳಿಸಬಹುದಾಗಿದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ತಿಳಿಸಿರುತ್ತಾರೆಂದು ವರದಿಯಾಗಿರುತ್ತದೆ.

ನಂತರ ಈ ನಿಯೋಗವು ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರಾದ ಶ್ರೀ ಪ್ರಿಯರಂಜನ ದಾಸ್ ಮುನ್ಷಿರವರನ್ನು ಆಂಧ್ರಪ್ರದೇಶದ ರೈತರ ಬವಣೆಯನ್ನು ನೀಗಿಸಲು ಕನಿಷ್ಠ 50 ಟಿ.ಎಂ.ಸಿ. ನೀರನ್ನಾದರೂ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಪ್ರಧಾನಮಂತ್ರಿಗಳು ಹಾಗೂ ಮಾನ್ಯ ಕೇಂದ್ರ ಜಲ ಸಂಪನ್ಮೂಲ ಸಚಿವರಾದ ಶ್ರೀ ಪ್ರಿಯರಂಜನ ದಾಸ್ ಮುನ್ಷಿರವರು ದೂರವಾಣಿ ಮುಖಾಂತರ ಖುದ್ದಾಗಿ ನನ್ನೊಡನೆ ಮಾತನಾಡಿ ಆಂಧ್ರಪ್ರದೇಶದ ಕೋರಿಕೆಯನ್ನು ಪರಿಶೀಲಿಸಲು ಸೂಚಿಸಿರುತ್ತಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪ್ರಸಕ್ತ 2004ನೇ ಮುಂಗಾರಿನಲ್ಲಿ 3.84 ಲಕ್ಷ ಹೆ. ಪ್ರದೇಶಕ್ಕೆ ವಿವಿಧ ಕಾಲುವೆಗಳಲ್ಲಿ ನೀರಾವರಿ ಒದಗಿಸಬೇಕಾಗಿದೆ. ದಿನಾಂಕ 16–7–2004 ರಿಂದ 120 ದಿನಗಳ ಮುಂಗಾರು ಹಂಗಾಮಿಗಾಗಿ ಕಾಲುವೆಗಳಲ್ಲಿ ಸಮರ್ಪಕವಾಗಿ ನೀರು ಹರಿ ಬಿಡಬೇಕಾಗಿರುತ್ತದೆ.